ISSN : 2320-0391

साहित्य और संस्कृति

# सृजन ಸೃಜನ

हिंदी-कन्नड त्रैमासिक पत्रिका ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

Peer Reviewed Journal जनवरी-दिसम्बर २०२०



Dr. Sunita B. Jadhav

Peer Reviewed Journal

ISSN : 2320-0391

ಸಾಹಿತ್ಯ ಮತ್ತು ಸಂಸ್ಕೃತಿ

# ಸೃಜನ

ವರ್ಷ-೮ ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ ಅಂಕ-೨೫

## ಕನ್ನಡ ವಿಭಾಗ

ಪ್ರಧಾನ ಸಂಪಾದಕರು

ಡಾ. ಎಸ್. ಟಿ. ಮೇರವಾಡೆ

ಸಂಪಾದಕರು

ಪ್ರೊ. ಬಿ. ಬಿ. ಡೆಂಗನವರ ಡಾ. ಆರ್. ವಿ. ಪಾಟೀಲ

ಬಡವನಾದರೂ ಚಿಂತೆ, ಬಲ್ಲಿದನಾದರೂ ಚಿಂತೆ, ಹಿಡಿಹೊನ್ನು ಕೈಯೊಳಗಿದ್ದರೂ ಚಿಂತೆಯೂ, ಪೊಡವಿಯೊಳಗೆ ಸಿರಿ ಪುರಂದರವಿಠಲನ ಬಿಡದೆ ಚಿಂತಿಸಿದರೆ ಚಿಂತೆ ನಿಶ್ಚಿಂತೆ!!

– ಪುರಂದರದಾಸರು

ಅತ್ತಲಿತ್ತ ಹೋಗದಂತೆ, ಹೆಳವನ ಮಾಡಯ್ಯಾ ತಂದೆ,  
ಸುತ್ತಿ ಸುಳಿದು ನೋಡದಂತೆ, ಅಂಧಕನ ಮಾಡಯ್ಯಾ ತಂದೆ,  
ಮತ್ತೊಂದ ಕೇಳದಂತೆ, ಕಿವುಡನ ಮಾಡಯ್ಯಾ ತಂದೆ,  
ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು, ಕೂಡಲಸಂಗಮದೇವಾ.

– ಬಸವಣ್ಣ.

## ಜನವರಿ - ಡಿಸೆಂಬರ ೨೦೨೦

(ಕೋವಿಡ್-೧೯, ನಿಮಿತ್ತ ಜನವರಿ ೨೦೨೦ ರಿಂದ ಪ್ರಕಟಗೊಳ್ಳಬೇಕಾದ ನಾಲ್ಕು ಪತ್ರಿಕೆಗಳನ್ನು ಕೂಡಿಸಿ ಒಂದು ವಿಶೇಷ ಸಂಚಿಕೆಯನ್ನು ಪ್ರಕಟಿಸಲಾಗಿದೆ.)

ವಿಳಾಸ

ಸೌಮ್ಯ ಪ್ರಕಾಶನ

'ಕಬೀರ ಕುಂಜ'

ಮಹಾಬಳೇಶ್ವರ ಕಾಲೋನಿ ದರ್ಗಾರೋಡ, ವಿಜಯಪುರ – 586 103

ಮೊ. 9448185705, 6363712614

Email : stmerwade1961@gmail.com / p.rvpatil1981@gmail.com

मुद्रक : त्वरित मुद्रण आफसेट प्रिन्टर्स कागदगेरि गल्ली गदग – 582 101

Email : chaitanyaoffset@gmail.com Mob : 9448223602, 9481523602, 8884495331

'ಇಲ್ಲಿಯ ಲೇಖನಗಳ ಅಭಿಪ್ರಾಯಗಳು, ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ – ಸಂ.'

೧೪. ಉರಿಲಿಂಗಪೆದ್ದಿ ಹಾಗೂ ಪುಣ್ಯಸ್ತ್ರೀ ಕಾಳವ್ವೆಯ ದಾಂಪತ್ಯ ಜೀವನ

- ಡಾ. ಪಂಡಿತ ಬಿ. ಕೆ.

೧೫. ಭಕ್ತಿಯಿಲ್ಲದ ಪೃಥ್ವಿಯ ಮೇಲೆ

- ಶ್ರೀ ರಾಜಶೇಖರ ಬಿರಾದಾರ ಬೋಸ್ಗಾಳ

೧೬. ಪ್ರಸ್ತುತ ಸಮಾಜಕ್ಕೆ ವಚನ ಸಾಹಿತ್ಯದ ಸಂದೇಶಗಳ ಅನುಸಂಧಾನ

- ಶ್ರೀ ರಾಮಕೃಷ್ಣಗೌಡ

೧೭. ಬೈಬಲ್‌ನಲ್ಲಿ ಜಾನ್‌ನ ಸುವಾರ್ತೆ ಒಂದು ಅಧ್ಯಯನ : ತಾತ್ವಿಕ ಚಿಂತನೆ

- ವೈ. ಪಿ. ರಮ್ಯ

೧೮. ಹರಿಹರನ ರಗಳೆಗಳಲ್ಲಿ ಭಕ್ತಿ ತರಂಗಿಣಿ

- ಸವಿತಾ ನಾಯ್ಕ

೧೯. ವೀರಶೈವ ಸಾಹಿತ್ಯದಲ್ಲಿನ ವಚನ ಮತ್ತು ತ್ರಿವಿಧಿ ಸಾಹಿತ್ಯದ ಪ್ರಸ್ತುತತೆ

- ಸಾವಿತ್ರಿ ಬಸಯ್ಯ ಮಠ

೨೦. ಶೂನ್ಯ ಸಂಪಾದನೆಗಳಲ್ಲಿ ಆಯ್ದಕ್ಕಿ ಲಕ್ಕಮ್ಮನ ವ್ಯಕ್ತಿತ್ವ ಹಾಗೂ ಕಾಯಕ ಸಿದ್ಧಾಂತ

- ಡಾ. ಶರಣಮ್ಮ ಬಿ.ಪಾಟೀಲ

೨೧. ಬಸವಣ್ಣನವರ ವಚನಗಳ ಪ್ರಸ್ತುತತೆ

- ಕು. ಸುಧಾರಾಣಿ ಶಿವಪ್ಪಾ ಮಣೂರ

೨೨. ಕನಕದಾಸರ ಕೀರ್ತನೆಗಳಲ್ಲಿ ವೈಚಾರಿಕತೆ

- ಡಾ. ಸುನಂದಾ ಎಸ್. ಹಾಡಕಾರ

೨೩. ಧಾರ್ಮಿಕ ಸುಧಾರಣೆ ತರುವಲ್ಲಿ ಬಸವೇಶ್ವರರ ಪಾತ್ರ

- ಡಾ. ಸುನಿತಾ ಬಿ. ಜಾಧವ

೨೪. ಶರಣ ಸಾಹಿತ್ಯ ಪ್ರಸ್ತುತತೆ

- ತ್ರಿವೇಣಿ ಈ. ಬನಸೋಡೆ

೨೫. ಜೈನಧರ್ಮದ ಭಕ್ತಿಯ ನೆಲೆಗಳು : ಚಂಪೂ ಕವಿಗಳನ್ನು ಅನುಲಕ್ಷಿಸಿ

- ಶ್ರೀ ವೆಂಕಟೇಶ ಎಂ. ಪಾಟೀಲ

೨೬. ಜೈನ ಸಾಹಿತ್ಯದ ದಾರ್ಶನಿಕತೆ

- ಕು. ಸುಶೀಲಾದೇವಿ ಬಿ. ಬೆಟಗೇರಿ

೨೭. ಚಂಪು ಕವಿ ಕಾವ್ಯ – ಸಂಕ್ಷಿಪ್ತತೆ

- ಡಾ. ಆರ್. ವಿ. ಪಾಟೀಲ

೨೮. ಕನ್ನಡ ಶಾಸನಗಳಲ್ಲಿ ಮಹಿಳಾ ಪ್ರತಿನಿಧಿಕರಣ

- ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ

# ಧಾರ್ಮಿಕ ಸುಧಾರಣೆ ತರುವಲ್ಲಿ ಬಸವೇಶ್ವರರ ಪಾತ್ರ

• ಡಾ. ಸುನಿತಾ ಬಿ. ಜಾಧವ

ಶೈವ ಪಂಥದ ಒಂದು ರೂಪವಾಗಿರುವ ವೀರಶೈವ ಮತದ ತತ್ವಗಳನ್ನು ಕ್ರೋಢೀಕರಿಸಿ ಅದಕ್ಕೆ ನವಚೇತನವನ್ನು ತುಂಬಿ ಸತಯುಕ್ತವಾಗಿ ಶಕ್ತಿಶಾಲಿಯಾಗಿ ಮಾಡಿರುವುದರಲ್ಲಿ ಬಸವೇಶ್ವರರ ಪಾತ್ರವು ಬಹಳ ಮಹತ್ವಪೂರ್ಣವಾಗಿದೆ. ತಾವು ಕಂಡುಕೊಂಡ ಸತ್ಯವನ್ನು ಮತ್ತು ತಾತ್ವಿಕ ವಿಚಾರಗಳನ್ನು ಅವರು ಕನ್ನಡದ ವಚನಗಳ ಮೂಲಕ ಸಂದೇಶ ರೂಪವಾಗಿ ನಾಡಿನಾದ್ಯಂತ ಪ್ರಸಾರ ಮಾಡಿದರು. ಈ ಹಿನ್ನೆಲಯಲ್ಲಿ ಬಸವೇಶ್ವರರನ್ನು "ವೀರಶೈವ ಮತದ ಉದ್ಧಾರಕ"ರೆಂದು ಮತ್ತು "ನವಯುಗ ಪ್ರವರ್ತಕ ಆಚಾರ್ಯ" ರೆಂದು ಕರೆಯಬಹುದು. ಬಸವೇಶ್ವರರುತಮ್ಮ ಎಳೆಯ ವಯಸ್ಸಿನಲ್ಲಿಯೇ ಸಾಮಾಜಿಕ ಹಾಗೂ ಧಾರ್ಮಿಕ ಸಂವೇದನೆಗಳನ್ನು ಮೈಗೂಡಿಸಿಕೊಂಡವರು. ಅಂತೆಯೇಅವರು ಬ್ರಾಹ್ಮಣಜಾತಿಯಲ್ಲಿ ಹುಟ್ಟಿದರೂ ಬ್ರಾಹ್ಮಣ್ಯಕ್ಕೆ ಕಟ್ಟುಬೀಳದೆ ಇಡೀ ಸಮಾಜವನ್ನು ಮುತ್ತಿಕಾಡುತ್ತಿದ್ದಜಾತಿಯ ಕಟ್ಟುಪಾಡುಗಳು, ಕಂದಚಾರ, ಮೂಢನಂಬಿಕೆ, ಅಸಮಾನತೆ, ಸ್ತ್ರೀಯರ ಅವಗಣನೆ, ಅತ್ಯಾಚಾ ಅವಹೇಳನ – ಶೋಷಣೆ– ಇವುಗಳನ್ನು ತೊಡೆದು ಹಾಕಲು ರಾಜಕೀಯ ಶಕ್ತಿ ಹಾಗೂ ಕಾನೂನಿನ ಬಳಕೆಗಿಂತಲೂ ಧಾರ್ಮಿಕ ಸಾಧನವೇ ಹೆಚ್ಚು ಪ್ರಭಾವಿ ಹಾಗೂ ಪರಿಣಾಮಕಾರಿ ಎಂದು ಮನಗಂಡು ಉನ್ನತ ರಾಜಕೀಯ ಸ್ಥಾನದಲ್ಲಿದ್ದರೂ ರಾಜಕೀಯ ಶಕ್ತಿ ಸಾಧನಗಳನ್ನು ಬಳಸದೆ ಅನುನಯದ ಹಾಗೂ ಮನವೊಲಿಕೆಯ ಧಾರ್ಮಿಕ ಹಾದಿಯನ್ನು ತುಳಿದವರು. ತಮ್ಮದೇಆದಧಾರ್ಮಿಕ ಪಥದಲ್ಲಿ ಸಾಗಿದ ಬಸವೇಶ್ವರರು ವೀರಶೈವ ಮತದ ಉದ್ಧಾರಕರಾಗಿ ಹಾಗೂ ವೀರಶೈವ ಆಂದೋಲನದ ಅಧ್ವರ್ಯುವಾಗಿ ಮೂಡಿಬಂದರು. ತಮ್ಮ ಈ ಪಾತ್ರದಲ್ಲಿ "ವೀರಶೈವ ಆಂದೋಲ"ವೆಂಬ ಸಾಧನದ ಮೂಲಕ ಅವರ ಆಗಿನ ಸಮಾಜದ ಧಾರ್ಮಿಕ ವಲಯದಲ್ಲಿ ಬಹಳಷ್ಟು ಸುಧಾರಣೆಗಳನ್ನು ತಂದರು. ಅವುಗಳಲ್ಲಿ ಈ ಕೆಳಗಿನವು ಮುಖ್ಯವಾದವುಗಳು.

### ಏಕದೇವೋಪಾಸನೆ

ಬಸವೇಶ್ವರರು ಪ್ರತಿಪಾದನೆ ಮಾಡಿದ ವೀರಶೈವ ಮತದ ಪ್ರಕಾರ ಶಿವನು ಸರ್ವೋತ್ತಮನು ಅವನು ಪರಬ್ರಹ್ಮ, ಪರವಸ್ತು ಮತ್ತು ಪರತತ್ವನಾಗಿರುತ್ತಾನೆ. ಆತನೇ ಸೃಷ್ಟಿ–ಸ್ಥಿತಿ–ಲಯಗಳಿಗೆ ಕಾರಣೀಕರ್ತನಾಗಿದ್ದಾನೆ. ಶಿವನು ಶಕ್ತಿ ವಿಶಿಷ್ಟನು, ಪರಿಪೂರ್ಣನು, ಲಿಂಗ ಸ್ವರೂಪನು, ಸರ್ವಜ್ಞನು ಮತ್ತು ಸರ್ವಶಕ್ತನೂಆಗಿದ್ದಾನೆ. ಈ ವಿಚಾರಗಳನ್ನು ಪ್ರೌಢಪೂರ್ಣವಾಗಿ ಪ್ರತಿಪಾದನೆ ಮಾಡಿದ ಬಸವೇಶ್ವರರು ಬಹುದೇವತಾರಾಧನೆಯನ್ನು ಒಪ್ಪಲಿಲ್ಲ.

### ನೀತಿ ಸಂಹಿತೆಯ ಮೇಲೆ ವಿಶೇಷ ಒತ್ತು

ಬಸವೇಶ್ವರರ ಭಕ್ತಿ ಪಂಥವು ನೈತಿಕ ನಿಯಮಗಳ ಆಧಾರದ ಮೇಲೆ ರಚಿತವಾದುದು. ದಯೆ, ಸಹಾನುಭೂತಿ, ಮಾನವೀಯತೆ, ಸಹನೆ ಮತ್ತು ಸೇವಾಮನೋಭಾವದ ಗುಣಗಳನ್ನು ಅವರು ಒತ್ತಿ ಹೇಳಿದರು. "ದಯವಿಲ್ಲದ ಧರ್ಮವಾವುದಯ್ಯಾ?... ದಯವೇ ಧರ್ಮದ ಮೂಲವಯ್ಯಾ" ಎಂಬ ಅವರ ಮಾತುಗಳು ದಯಾಗುಣಕ್ಕೆ ಅವರು ಕೊಟ್ಟ ಮಹತ್ವವನ್ನು ತೋರುವುವು. ನಾಗರ ಕಲ್ಲಿಗೆ ಹಾಲೆರೆದು ಪೂಜೆ ಮಾಡುವ ಜನ ನಿಜವಾದ ಹಾವು ಬಂದಾಗ ಹೊಡೆದು ಕೊಲ್ಲುವುದು ಎಂತಹ ಸೋಗಲಾಡಿತನ ಎಂದು ಛೇಡಿಸಿದರು. ನಿತ್ಯ ಜೀವನದಲ್ಲಿ

# ಧಾರ್ಮಿಕ ಸುಧಾರಣೆ ತರುವಲ್ಲಿ ಬಸವೇಶ್ವರರ ಪಾತ್ರ

• ಡಾ. ಸುನಿತಾ ಬಿ. ಜಾಧವ

ಶೈವ ಪಂಥದ ಒಂದು ರೂಪವಾಗಿರುವ ವೀರಶೈವ ಮತದ ತತ್ವಗಳನ್ನು ಕ್ರೋಡ್ರಿಕರಿಸಿ ಅದಕ್ಕೆ ನವಚೇತನವನ್ನು ತುಂಬಿ ಸತಯುಕ್ತವಾಗಿ ಶಕ್ತಿಶಾಲಿಯಾಗಿ ಮಾಡಿರುವುದರಲ್ಲಿ ಬಸವೇಶ್ವರರ ಪಾತ್ರವು ಬಹಳ ಮಹತ್ವಪೂರ್ಣದ್ದಾಗಿದೆ. ತಾವು ಕಂಡುಕೊಂಡ ಸತ್ಯವನ್ನು ಮತ್ತು ತಾತ್ವಿಕ ವಿಚಾರಗಳನ್ನು ಅವರು ಕನ್ನಡದ ವಚನಗಳ ಮೂಲಕ ಸಂದೇಶ ರೂಪವಾಗಿ ನಾಡಿನಾದ್ಯಂತ ಪ್ರಸಾರ ಮಾಡಿದರು. ಈ ಹಿನ್ನೆಲಯಲ್ಲಿ ಬಸವೇಶ್ವರರನ್ನು "ವೀರಶೈವ ಮತದ ಉದ್ಧಾರಕ"ರೆಂದು ಮತ್ತು "ನವಯುಗ ಪ್ರವರ್ತಕ ಆಚಾರ್ಯ" ರೆಂದು ಕರಿಯುಬಹುದು. ಬಸವೇಶ್ವರರುತಮ್ಮ ಎಳಿಯ ವಯಸ್ಸಿನಲ್ಲಿಯೇ ಸಾಮಾಜಿಕ ಹಾಗೂ ಧಾರ್ಮಿಕ ಸಂವೇದನೆಗಳನ್ನು ಮೈಗೂಡಿಸಿಕೊಂಡವರು. ಅಂತಯೇಅವರು ಬ್ರಾಹ್ಮಣಜಾತಿಯಲ್ಲಿ ಹುಟ್ಟಿದರೂ ಬ್ರಾಹ್ಮಣಕ್ಕೆ ಕಟ್ಟುಬೀಳದೆ ಇಡೀ ಸಮಾಜವನ್ನು ಮುತ್ತಿಕಾಡುತ್ತಿದ್ದಜಾತಿಯ ಕಟ್ಟುಪಾಡುಗಳು, ಕಂದಚಾರ, ಮೂಢಬಂಬಿಕೆ, ಅಸಮಾನತೆ, ಸ್ತ್ರೀಯರ ಅವಗಣನೆ, ಅತ್ಯಾಚಾ ಅವಹೇಳನ – ಶೋಷಣೆ– ಇವುಗಳನ್ನು ತೊಡೆದು ಹಾಕಲು ರಾಜಕೀಯ ಶಕ್ತಿ ಹಾಗೂ ಕಾನೂನಿನ ಬಳಕೆಗಿಂತಲೂ ಧಾರ್ಮಿಕ ಸಾಧನವೇ ಹೆಚ್ಚು ಪ್ರಭಾವಿ ಹಾಗೂ ಪರಿಣಾಮಕಾರಿ ಎಂದು ಮನಗಂಡು ಉನ್ನತ ರಾಜಕೀಯ ಸ್ಥಾನದಲ್ಲಿದ್ದರೂ ರಾಜಕೀಯ ಶಕ್ತಿ ಸಾಧನಗಳನ್ನು ಬಳಸದೆ ಅನುನಯದ ಹಾಗೂ ಮನಮೊಲಿಕಿಯ ಧಾರ್ಮಿಕ ಹಾದಿಯನ್ನು ತುಳಿದವರು. ತಮ್ಮದೆಆದಧಾರ್ಮಿಕ ಪಥದಲ್ಲಿ ಸಾಗಿದ ಬಸವೇಶ್ವರರು ವೀರಶೈವ ಮತದ ಉದ್ಧಾರಕರಾಗಿ ಹಾಗೂ ವೀರಶೈವ ಆಂದೋಲನದ ಅರ್ಧರ್ಯುವಾಗಿ ಮೂಡಿಬಂದರು. ತಮ್ಮ ಈ ಪಾತ್ರದಲ್ಲಿ "ವೀರಶೈವ ಆಂದೋಲ"ವೆಂಬ ಸಾಧನದ ಮೂಲಕ ಅವರ ಆಗಿನ ಸಮಾಜದ ಧಾರ್ಮಿಕ ವಲಯದಲ್ಲಿ ಬಹಳಷ್ಟು ಸುಧಾರಣೆಗಳನ್ನು ತಂದರು. ಅವುಗಳಲ್ಲಿ ಈ ಕೆಳಗಿನವು ಮುಖ್ಯವಾದವುಗಳು.

### ಏಕದೇವೋಪಾಸನೆ

ಬಸವೇಶ್ವರರು ಪ್ರತಿಪಾದನೆ ಮಾಡಿದ ವೀರಶೈವ ಮತದ ಪ್ರಕಾರ ಶಿವನು ಸರ್ವೋತ್ತಮನು ಅವನು ಪರಬ್ರಹ್ಮ, ಪರವಸ್ತು ಮತ್ತು ಪರತತ್ವವಾಗಿರುತ್ತಾನೆ. ಆತನೇ ಸೃಷ್ಟಿ–ಸ್ಥಿತಿ–ಲಯಗಳಿಗೆ ಕಾರಣೀಕರ್ತನಾಗಿದ್ದಾನೆ. ಶಿವನು ಶಕ್ತಿ ವಿಶಿಷ್ಟನು, ಪರಿಪೂರ್ಣನು, ಲಿಂಗ ಸ್ವರೂಪನು, ಸರ್ವಜ್ಞನು ಮತ್ತು ಸರ್ವಶಕ್ತನೂಆಗಿದ್ದಾನೆ. ಈ ವಿಚಾರಗಳನ್ನು ಪ್ರೌಢಪೂರ್ಣವಾಗಿ ಪ್ರತಿಪಾದನೆ ಮಾಡಿದ ಬಸವೇಶ್ವರರು ಬಹುದೇವತಾರಾಧನಯನ್ನು ಒಪ್ಪಲಿಲ್ಲ.

### ನೀತಿ ಸಂಹಿತೆಯ ಮೇಲೆ ವಿಶೇಷ ಒತ್ತು

ಬಸವೇಶ್ವರರ ಭಕ್ತಿ ಪಂಥವು ನೈತಿಕ ನಿಯಮಗಳ ಆಧಾರದ ಮೇಲೆ ರಚಿತವಾದುದು. ದಯೆ, ಸಹಾನುಭೂತಿ, ಮಾನವೀಯತೆ, ಸಹನೆ ಮತ್ತು ಸೇವಾಮನೋಭಾವದ ಗುಣಗಳನ್ನು ಅವರು ಒತ್ತಿ ಹೇಳಿದರು. "ದಯವಿಲ್ಲದ ಧರ್ಮವಾವುದಯ್ಯಾ?... ದಯವೇ ಧರ್ಮದ ಮೂಲವಯ್ಯಾ" ಎಂಬ ಅವರ ಮಾತುಗಳು ದಯಾಗುಣಕ್ಕೆ ಅವರು ಕೊಟ್ಟ ಮಹತ್ವವನ್ನು ತೋರುವುವು. ನಾಗರ ಕಲ್ಲಿಗೆ ಹಾಲೆರೆದು ಪೂಜೆ ಮಾಡುವ ಜನ ನಿಜವಾದ ಹಾವು ಬಂದಾಗ ಹೊಡೆದು ಕೊಲ್ಲುವುದು ಎಂತಹ ಸೋಗಲಾಡಿತನ ಎಂದು ಛೇಡಿಸಿದರು. ನಿತ್ಯ ಜೀವನದಲ್ಲಿ


ISSN : 2320-0391

ಪ್ರತಿಯೊಬ್ಬರೂ ಅನುಸರಿಸಬೇಕಾದ ನೀತಿಯ ಬಗ್ಗೆ ಅವರು ಹೀಗೆ ಹೇಳುತ್ತಾರೆ."ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ತನ್ನ ಬಣ್ಣಿಸಬೇಡ, ಇದರ ಹಳಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ".ಮಾತುಗಳು ಅವರು ನೈತಿಕತೆಗೆ ಕೊಟ್ಟ ಪ್ರಾಮುಖ್ಯತೆಯನ್ನು ಸಾರುತ್ತವೆ.

**ಜಾತಿ– ವರ್ಗಗಳಿಂದ ಮುಕ್ತವಾದ ಸಮಾಜದರಚನೆ**

ವೀರಶೈವ ಮತವು ವರ್ಗರಹಿತ ಹಾಗೂ ಜಾತಿರಹಿತ ಸಮಾಜದ ಸ್ಥಾಪನೆಯ ಗುರಿಗಳನ್ನು ಹೊಂದಿದ ಒಂದು ಆಂದೋಲನವಾಗಿತ್ತು. ಅದು ಸಾಮಾಜಿಕ ಅಸಮಾನತೆಗಳ ಮತ್ತು ಪುರೋಹಿತಶಾಹಿ ಹಿಂದೂಧರ್ಮವು ಒತ್ತಾಸೆ ನೀಡಿದ್ದ ಜಾತಿಯ ಏಣಿ–ಶ್ರೇಣಿ ವ್ಯವಸ್ಥೆಯ ವಿರುದ್ಧ ಬಂಡೆದ್ದು ನಿಂತಿತು, ಮೇಲ್ಜಾತಿಗಳಿಂದ ಕೆಳಜಾತಿಗಳ ಶೋಷಣೆಳಾಗುತ್ತಿದ್ದುದನ್ನು ಸ್ವತಃ ಮೇಲ್ಜಾತಿಯಲ್ಲಿ ಹುಟ್ಟಿದ ಅವರು ಸಹಿಸಲಿಲ್ಲ. ಜಾತಿ ವ್ಯವಸ್ಥೆಯ ಭಾಗವಾಗಿದ್ದ ಅಸ್ಪೃಶ್ಯತೆಯನ್ನು ಅವರು ಉಗ್ರವಾಗಿ ಖಂಡಿಸಿದರು. ಹುಟ್ಟಿನಿಂದಯಾರೂ ಹೀನ ಜಾತಿಯವನಾಗುವುದಿಲ್ಲ, ಆದರೆ ಆಚಾರದಿಂದ ಎಂದು ಹೇಳಿದ ಬಸವೇಶ್ವರರು "ಕೊಲುವವನೆ ಮಾದಿಗ, ಹೊಲಸು ತಿಂಬುವವನೇ ಹೊಲಯ" ಎಂದು ಹೇಳಿ ಸದಾಚಾರ ಮತ್ತು ಸನ್ನಡತೆಗೆ ಪ್ರಾಮುಖ್ಯತೆ ನೀಡಿದರು.

**ವೃತ್ತಿ ಸಮಾನತೆ**

ಎಲ್ಲಾ ವೃತ್ತಿಗಳೂ ಸಮಾನ ಪ್ರಾಮುಖ್ಯತೆಯವುಗಳೆಂದು ಸಾರಿದ ಅವರು ಯಾವುದೇ ಕಟ್ಟುಪಾಡುಗಳಿಲ್ಲದ ಜನ ತಮ್ಮ ಅರ್ಹತೆ, ಆಸಕ್ತಿ ಮತ್ತು ಅವಕಾಶಗಳಿಗೆ ಅನುಸಾರವಾಗಿ ತಮಗೆ ಬೇಕಾದ ವೃತ್ತಿಯನ್ನು ಅನುಸರಿಸಲು ಸ್ವತಂತ್ರರಿರಬೇಕೆಂದು ಸಾರಿದರು. ಸಮಾಜದ ಒಟ್ಟು ವ್ಯವಸ್ಥೆಯಲ್ಲಿ ಪ್ರತಿಯೊಂದು ವೃತ್ತಿಗೂ ಒಂದು ವಿಶಿಷ್ಟ ಸ್ಥಾನವಿರುವುದರಿಂದ ಯಾವುದೇ ವೃತ್ತಿಗೂ ತನ್ನದೇ ಆದ ಮಹತ್ವವಿರುತ್ತದೆ. ಘನತೆ–ಗೌರವವೆಂಬುದಿರುತ್ತದೆ. ಆದ್ದರಿಂದ, ನೈತಿಕ ಕಟ್ಟುಪಾಡುಗಳಿಗೆ ಬದ್ಧವಾದಯಾವುದೇ ಬಗೆಯ ಮಾನವ ಶ್ರಮವನ್ನು ಗೌರವಿಸಬೇಕು ಎಂದು ಶ್ರಮ ಗೌರವದ ತತ್ವವನ್ನು ಪ್ರಚಾರ ಮಾಡಿದರು. "ಕಠಿಣದುಡಿಮೆಗೆ ಹತ್ತಿರದ ಮಾರ್ಗವೆಂಬುದಿಲ್ಲ". ದುಡಿಮೆಯಿಂದಲೇ ಇಹ–ಪರಗಳು ಲಭ್ಯವಾಗುತ್ತವೆ"ಎಂಬುದನ್ನು "ಕಾಯಕವೇಕೈಲಾಸವಯ್ಯಾ" ಎಂಬ ಅವರ ಘೋಷವಾಕ್ಯ ಶ್ರುತ ಪಡಿಸುತ್ತದೆ. ಇದನ್ನೇ ಮುಂದೆ ಕವಿ ರವೀಂದ್ರನಾಥ ಠಾಗೋರರು "ಶ್ರಮವೇ ಆರಾಧನೆ" ಎಂದುಕರೆದರು. ಉದ್ಯೋಗಗಳು ಜನ್ಮದಿಂದ ಬರುವುದಿಲ್ಲ; ಆದರೆ ಆಚರಣೆಯಿಂದ ಎಂಬುದನ್ನು ಅವರ ವಚನವೊಂದು ಹೀಗೆ ಸಾರುತ್ತದೆ: "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ, ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ..." ಎಂಬುದನ್ನು ಸಾರಿದರು.

**ಸ್ತ್ರೀ ಸ್ವಾತಂತ್ರದ ಪ್ರತಿಪಾದನೆ**

ವೈದಿಕ ಧರ್ಮದಲ್ಲಿ ಬಸವೇಶ್ವರರ ಕಾಲದ ಸಮಯಕ್ಕೆ ಸ್ತ್ರೀಯರನ್ನು ಅವಗಣನೆ ಮಾಡುವ ಪರಂಪರೆ ಆರಂಭವಾಗಿತ್ತು. ಅವರು ಪುರುಷರ ಅವಲಂಬಿಗಳಾಗಿ, ಅಡಿಯಾಳಾಗಿ, ಯಾವುದೇ ಹೆಚ್ಚಿನ ಸ್ವಾತಂತ್ರಗಳಿಲ್ಲದೆ ವಾಸಿಸಬೇಕಾಗಿದ್ದ ದಿನಗಳವು. ಬಸವೇಶ್ವರರು ಈ ದೋಷವನ್ನು ಗುರುತಿಸಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಒತ್ತು ನೀಡಿದ ಬಸವೇಶ್ವರರು ಸ್ತ್ರೀಯರಿಗೂ ಲಿಂಗ ಧರಿಸುವ, ಶಿವಾರಾಧನೆ ಮಾಡುವ ಹಕ್ಕು ನೀಡಿದರು.ವಿಧವಾ ಪುನರ್ವಿವಾಹಕ್ಕೆ ಅವಕಾಶವಿರಬೇಕೆಂದು ಹೇಳಿದ ಅವರು ಸ್ತ್ರೀಯರ ಅಸಾಮಾರ್ಥ್ಯತೆಯನ್ನು ಸಾರುವ ಸಂಕೇತವಾಗಿ ಅವರು ಬಹಿಷ್ಕೃಯರಾಗಿದ್ದಾಗ ಪಾಲನೆ ಮಾಡಬೇಕಾಗಿದ್ದ "ಮೈಲಿಗೆ"ಯಆಚರಣೆಯನ್ನು ತೊಡೆದು ಹಾಕಿದರು. ಸ್ತ್ರೀಯರೂ ಕೂಡ ಪುರುಷರಂತೆ ಧಾರ್ಮಿಕ ವಿಚಾರಗಳಲ್ಲಿ ಮುಕ್ತ ಚರ್ಚೆ ಮಾಡಲು ಅವಕಾಶ ನೀಡಲಾಯಿತು. ಅನುಭವ ಮಂಟಪದಲ್ಲಿ ಮಹಾಶಿವಭಕ್ತೆ ಅಕ್ಕಮಹಾದೇವಿ ಶಿವಭಕ್ತರ ಜೊತೆಗೆಧಾರ್ಮಿಕ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದಳು. ಬಸವೇಶ್ವರರ ಪತ್ನಿ ನೀಲಾಂಬಿಕೆ ಮತ್ತು ಮಹಾದೇವಿಯಮ್ಮ ಹಾಗೂ ಮುಕ್ತಾಯಕ್ಕ ಮುಂತಾದವರು ಪ್ರಸಿದ್ಧ ಶಿವಭಕ್ತೆಯರಾಗಿದ್ದರು.

**ಮೂಢ ನಂಬಿಕೆಗಳನ್ನು ಮೆಟ್ಟಿ ನಿಲ್ಲಲು, ಕಂದಾಚರನೆಗಳನ್ನು ಕಿತ್ತೆಸೆಯಲುಕರೆ**

ವೇದೋಪನಿಷತ್ತುಗಳ ಕಾಲದಲ್ಲಿದ್ದಂತಹ ವಿಚಾರ ಸ್ವಾತಂತ್ರ್ಯವು ಕಾಲಾನುಕ್ರಮದಲ್ಲಿ ಲುಪ್ತವಾಗಿ ಮುಗ್ಧತೆ, ಮೌಢ್ಯತೆ, ಸಂಪ್ರದಾಯ ಶರಣತೆ ಮತ್ತು ಶೂನ್ಯತೆಗಳು

ಪ್ರತಿಯೊಬ್ಬರೂ ಅನುಸರಿಸಬೇಕಾದ ನೀತಿಯ ಬಗ್ಗೆ ಅವರು ಹೀಗೆ ಹೇಳುತ್ತಾರೆ."ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ತನ್ನ ಬಣ್ಣಿಸಬೇಡ, ಇದರ ಹಳಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ".ಮಾತುಗಳು ಅವರು ನೈತಿಕತೆಗೆ ಕೊಟ್ಟ ಪ್ರಾಮುಖ್ಯತೆಯನ್ನು ಸಾರುತ್ತವೆ.

**ಜಾತಿ- ವರ್ಗಗಳಿಂದ ಮುಕ್ತವಾದ ಸಮಾಜದರಚನೆ**

ವೀರಶೈವ ಮತವು ವರ್ಗರಹಿತ ಹಾಗೂ ಜಾತಿರಹಿತ ಸಮಾಜದ ಸ್ಥಾಪನಯ ಗುರಿಗಳನ್ನು ಹೊಂದಿದ ಒಂದು ಆಂದೋಲನವಾಗಿತ್ತು. ಅದು ಸಾಮಾಜಿಕ ಅಸಮಾನತೆಗಳ ಮತ್ತು ಪುರೋಹಿತಶಾಹಿ ಹಿಂದೂಧರ್ಮವು ಒತ್ತಾಸೆ ನೀಡಿದ್ದ ಜಾತಿಯ ಏಣಿ-ಶ್ರೇಣಿ ವ್ಯವಸ್ಥೆಯ ವಿರುದ್ಧ ಬಂಡೆದ್ದು ನಿಂತಿತು. ಮೇಲ್ಜಾತಿಗಳಿಂದ ಕೆಳಜಾತಿಗಳ ಶೋಷಣೆಳಾಗುತ್ತಿದ್ದುದನ್ನು ಸ್ವತಃ ಮೇಲ್ಜಾತಿಯಲ್ಲಿ ಹುಟ್ಟಿದ ಅವರು ಸಹಿಸಲಿಲ್ಲ. ಜಾತಿ ವ್ಯವಸ್ಥೆಯ ಭಾಗವಾಗಿದ್ದ ಅಸ್ಪೃಶ್ಯತೆಯನ್ನು ಅವರು ಉಗ್ರವಾಗಿ ಖಂಡಿಸಿದರು. ಹುಟ್ಟಿನಿಂದಯಾರೂ ಹೀನ ಜಾತಿಯವನಾಗುವುದಿಲ್ಲ, ಆದರೆ ಆಚಾರದಿಂದ ಎಂದು ಹೇಳಿದ ಬಸವೇಶ್ವರರು "ಕೊಲುವವನೆ ಮಾದಿಗ, ಹೊಲಸು ತಿಂಬುವವನೇ ಹೊಲಯ" ಎಂದು ಹೇಳಿ ಸದಾಚಾರ ಮತ್ತು ಸನ್ನಡತೆಗೆ ಪ್ರಾಮುಖ್ಯತೆ ನೀಡಿದರು.

**ವೃತ್ತಿ ಸಮಾನತೆ**

ಎಲ್ಲಾ ವೃತ್ತಿಗಳೂ ಸಮಾನ ಪ್ರಾಮುಖ್ಯತೆಯವುಗಳೆಂದು ಸಾರಿದ ಅವರು ಯಾವುದೇ ಕಟ್ಟುಪಾಡುಗಳಿಲ್ಲದ ಜನ ತಮ್ಮ ಅರ್ಹತೆ, ಆಸಕ್ತಿ ಮತ್ತು ಅವಕಾಶಗಳಿಗೆ ಅನುಸಾರವಾಗಿ ತಮಗೆ ಬೇಕಾದ ವೃತ್ತಿಯನ್ನು ಅನುಸರಿಸಲು ಸ್ವತಂತ್ರರಿರಬೇಕೆಂದು ಸಾರಿದರು. ಸಮಾಜದ ಒಟ್ಟು ವ್ಯವಸ್ಥೆಯಲ್ಲಿ ಪ್ರತಿಯೊಂದು ವೃತ್ತಿಗೂ ಒಂದು ವಿಶಿಷ್ಟ ಸ್ಥಾನವಿರುವುದರಿಂದ ಯಾವುದೇ ವೃತ್ತಿಗೂ ತನ್ನದೇ ಆದ ಮಹತ್ವವಿರುತ್ತದೆ. ಘನತೆ-ಗೌರವವೆಂಬುದಿರುತ್ತದೆ. ಆದ್ದರಿಂದ, ನೈತಿಕ ಕಟ್ಟುಪಾಡುಗಳಿಗೆ ಬದ್ಧವಾದಯಾವುದೇ ಬಗೆಯ ಮಾನವ ಶ್ರಮವನ್ನು ಗೌರವಿಸಬೇಕು ಎಂದು ಶ್ರಮ ಗೌರವದ ತತ್ವವನ್ನು ಪ್ರಚಾರ ಮಾಡಿದರು. "ಕಠಿಣದುಡಿಮೆಗೆ ಹತ್ತಿರದ ಮಾರ್ಗವೆಂಬುದಿಲ್ಲ", ದುಡಿಮೆಯಿಂದಲೇ ಇಹ-ಪರಗಳು ಲಭ್ಯವಾಗುತ್ತವೆ"ಎಂಬುದನ್ನು "ಕಾಯಕವೇಕೈಲಾಸವಯ್ಯಾ" ಎಂಬ ಅವರ ಘೋಷವಾಕ್ಯ ಶ್ರುತ ಪಡಿಸುತ್ತದೆ. ಇದನ್ನೆ ಮುಂದೆ ಕವಿ ರವೀಂದ್ರನಾಥ ಠಾಗೋರರು "ಶ್ರಮವೇ ಆರಾಧನೆ" ಎಂದುಕರೆದರು. ಉದ್ಯೋಗಗಳು ಜನ್ಮದಿಂದ ಬರುವುದಿಲ್ಲ; ಆದರೆ ಆಚರಣೆಯಿಂದ ಎಂಬುದನ್ನು ಅವರ ವಚನವೊಂದು ಹೀಗೆ ಸಾರುತ್ತದೆ: "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ, ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ..." ಎಂಬುದನ್ನು ಸಾರಿದರು.

**ಸ್ತ್ರೀ ಸ್ವಾತಂತ್ರದ ಪ್ರತಿಪಾದನೆ**

ವೈದಿಕ ಧರ್ಮದಲ್ಲಿ ಬಸವೇಶ್ವರರ ಕಾಲದ ಸಮಯಕ್ಕೆ ಸ್ತ್ರೀಯರನ್ನು ಅವಗಣನೆ ಮಾಡುವ ಪರಂಪರೆ ಆರಂಭವಾಗಿತ್ತು. ಅವರು ಪುರುಷರ ಅವಲಂಬಿಗಳಾಗಿ, ಅಡಿಯಾಳಾಗಿ, ಯಾವುದೇ ಹೆಚ್ಚಿನ ಸ್ವಾತಂತ್ರಗಳಿಲ್ಲದೆ ವಾಸಿಸಬೇಕಾಗಿದ್ದ ದಿನಗಳವು. ಬಸವೇಶ್ವರರು ಈ ದೋಷವನ್ನು ಗುರುತಿಸಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಒತ್ತು ನೀಡಿದ ಬಸವೇಶ್ವರರು ಸ್ತ್ರೀಯರಿಗೂ ಲಿಂಗ ಧರಿಸುವ, ಶಿವಾರಾಧನೆ ಮಾಡುವ ಹಕ್ಕು ನೀಡಿದರು.ವಿಧವಾ ಪುನರ್ವಿವಾಹಕ್ಕೆ ಅವಕಾಶವಿರಬೇಕೆಂದು ಹೇಳಿದ ಅವರು ಸ್ತ್ರೀಯರ ಅಸಾಮಾರ್ಥ್ಯತಯನ್ನು ಸಾರುವ ಸಂಕೇತವಾಗಿ ಅವರು ಬಹಿಷ್ಠೆಯರಾಗಿದ್ದಾಗ ಪಾಲನೆ ಮಾಡಬೇಕಾಗಿದ್ದ "ಮೈಲಿಗೆ"ಯಆಚರಣೆಯನ್ನು ತೊಡೆದು ಹಾಕಿದರು. ಸ್ತ್ರೀಯರೂ ಕೂಡ ಪುರುಷರಂತೆ ಧಾರ್ಮಿಕ ವಿಚಾರಗಳಲ್ಲಿ ಮುಕ್ತ ಚರ್ಚೆ ಮಾಡಲು ಅವಕಾಶ ನೀಡಲಾಯಿತು. ಅನುಭವ ಮಂಟಪದಲ್ಲಿ ಮಹಾಶಿವಭಕ್ತೆ ಅಕ್ಕಮಹಾದೇವಿ ಶಿವಭಕ್ತರ ಜೊತೆಗೆಧಾರ್ಮಿಕ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದಳು. ಬಸವೇಶ್ವರರ ಪತ್ನಿ ನೀಲಾಂಬಿಕೆ ಮತ್ತು ಮಹಾದೇವಿಯಮ್ಮ ಹಾಗೂ ಮುಕ್ತಾಯಕ್ಕ ಮುಂತಾದವರು ಪ್ರಸಿದ್ದ ಶಿವಭಕ್ತೆಯರಾಗಿದ್ದರು.

ಮೂಢ ನಂಬಿಕೆಗಳನ್ನು ಮೆಟ್ಟಿ ನಿಲ್ಲಲು, ಕಂದಾಚರನೆಗಳನ್ನು ಕಿತ್ತೆಸೆಯಲುಕರೆ

ವೇದೋಪನಿಷತ್ತುಗಳ ಕಾಲದಲ್ಲಿದ್ದಂತಹ ವಿಚಾರ ಸ್ವಾತಂತ್ರ್ಯವು ಕಾಲಾನುಕ್ರಮದಲ್ಲಿ ಲುಪ್ತವಾಗಿ ಮುಗ್ಧತೆ, ಮೌಢ್ಯತೆ, ಸಂಪ್ರದಾಯ ಶರಣತೆ ಮತ್ತು ಶೂನ್ಯತೆಗಳು

ವಿಜೃಂಭಿಸುತ್ತಿದ್ದಂತಹ ದಿನಗಳಲ್ಲಿ ಬಸವೇಶ್ವರರು ಸ್ವಾತಂತ್ರ್ಯದ ಕಹಳೆಯೂದಿದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಎಲ್ಲಾ ಬಗೆಯದುಷ್ಟ ಆಚರಣೆಗಳನ್ನು ಕೈಬಿಡಲು ಮತ್ತು ವಿಚಾರರಹಿತ, ಆಧಾರರಹಿತ ಹಾಗೂ ತರ್ಕ ರಹಿತವಾದಗೊಡ್ಡು ನಂಬಿಕೆಗಳನ್ನು ತೊಡೆದು ಹಾಕಲು ಅವರು ಕರೆ ನೀಡಿದರು.

## ಅಸ್ಪೃಶ್ಯತೆಯ ನಿವಾರಣೆ

ಜಾತಿ ಪದ್ಧತಿಗೆ ಅಂಟಿಕೊಂಡಿರುವ ಬಹು ದೊಡ್ಡ ಅನಿಷ್ಟವಾಗಿರುವ 'ಅಸ್ಪೃಶ್ಯತೆಯು' ೧೨ನೇ ಶತಮಾನದಲ್ಲಿಯೂ ಆಚರಣೆಯಲ್ಲಿದ್ದು ಅದರ ವಿರುದ್ಧ ಬಸವೇಶ್ವರರು ಮೌನಕ್ರಾಂತಿ ನಡೆಸಿದರು. 'ಅಸ್ಪೃಶ್ಯರ' ವರ್ಗದಿಂದಲೂ ಅವರಿಗೆ ಅನೇಕ ಜನ ಅನುಯಾಯಿಗಳು ಲಭ್ಯವಾಗಿದ್ದು ಅವರುಗಳಲ್ಲಿ ಮಡಿವಾಳ ಮಾಚಯ್ಯ, ಡೋಹರಕಕ್ಕಯ್ಯ, ಮದಾರಚೆನ್ನಯ್ಯ ಮುಂತಾದವರು ಮುಖ್ಯರು. ಅಸ್ಪೃಶ್ಯರಿಗೆ ಸಮಾನವಾದ ಧಾರ್ಮಿಕ, ಶೈಕ್ಷಣಿಕ, ಆರ್ಥಿಕ ಹಕ್ಕುಗಳು ಮತ್ತು ಅವಕಾಶಗಳು ದೊರಕುವಂತಾಗಬೇಕೆಂದು ಅವರು ಆಗ್ರಹ ಪಡಿಸಿದರು. ಅಂತರ್ಜಾತೀಯ ವಿವಾಹಗಳಿಗೆ ಅವರು ಪ್ರೋತ್ಸಾಹ ನೀಡಿದ್ದಲ್ಲದೆ ಅಸ್ಪೃಶ್ಯನಾಗಿದ್ದ ಹರಳಯ್ಯ ಮತ್ತು ಬ್ರಾಹ್ಮಣನಾಗಿದ್ದ ಮಧುವರಸ ಇವರುಗಳನ್ನು ಶಿವಭಕ್ತರನ್ನಾಗಿಸಿ ಅವರ ಮಕ್ಕಳ ನಡುವೆ ವಿವಾಹ ನಡೆಯುವಂತೆ ಮಾಡಿದರು.

## ಪುರೋಹಿಶಾಹಿಯ ವಿರುದ್ಧ ಸೆಟೆದು ನಿಂತ ಪಂಥ

ವೀರಶೈವ ಆಂದೋಲನದ ಪರಿಣಾಮವಾಗಿ ಸ್ಥಾಪಿತವಾದ ವೀರಶೈವ ಮತವನ್ನು ಹಿಂದೂ ಧರ್ಮದ ವಿಭಿನ್ನ ಬಂಡೆದ್ದು ನಿಂತ ಮತ ಎನ್ನುವುದಕ್ಕಿಂತ ಹಿಂದೂ ಧರ್ಮದೊಳಗಣ ಪುರೋಹಿತಶಾಹಿಯ ವಿರುದ್ಧ ಸಟೆದು ನಿಂತ ಪಂಥ ಎನ್ನುವುದು ಹೆಚ್ಚು ಸೂಕ್ತ. ಸಂಪ್ರದಾಯವಾದೀ ವೀರಶೈವರು ಇದು "ವಿಭಜನವಾದಿ ಮತ್ತು ಬ್ರಾಹ್ಮಣ ವಿರೋಧೀ ಪಂಥಅಲ್ಲ"ವೆಂದು ವಾದಿಸುವುದೂ ಇದೆ. ವೇದಗಳ ಪ್ರಾಮಾಣ್ಯವನ್ನುಒಪ್ಪುವುದಿಲ್ಲವೆಂದ ಮಾತ್ರಕ್ಕೆ ವೀರಶೈವರು ಹಿಂದುಗಳಲ್ಲ ಎಂದು ಹೇಳಲಾಗದು. [ಇತ್ತೀಚಿನವರೆಗೂ ತಮ್ಮನ್ನು ಎಂದೂ 'ಹಿಂದುಗಳಲ್ಲ' ಎಂದು ಕರೆದುಕೊಳ್ಳದ ವೀರಶೈವರ ಒಂದು ದೊಡ್ಡ ಗುಂಪು ಇದೀಗ ತನ್ನನ್ನು ಹಿಂದು ಅಲ್ಲ ಆದರೆ "ವೀರಶೈವ" ಎಂದೇ ಗುರುತಿಸಿ ಮಾನ್ಯ ಮಾಡಬೇಕೆಂದು ಈ ಹಿಂದೆ ಜನಗಣತಿಯ ಸಂದರ್ಭದಲ್ಲಿ ಕೇಳಿಕೊಂಡಿದೆ. ವೀರಶೈವರು ಸಂಖ್ಯೆಯ ದೃಷ್ಟಿಯಿಂದ ಕಡಿಮೆಯಿರುವುದರಿಂದ ತಮ್ಮನ್ನು "ಅಲ್ಪ ಸಂಖ್ಯಾತ"ರೆಂದು ಪರಿಗಣಿಸಿ ಅಲ್ಪಸಂಖ್ಯಾತರಿಗಾಗಿ ನಿಗದಿಸಲಾಗಿರುವ ಎಲ್ಲಾ "ಮೀಸಲಾತಿ"ಯ ಸೌಲಭ್ಯಗಳನ್ನು ನೀಡಬೇಕೆಂದು ಅದು ಬೇಡಿಕೆ ಮುಂದಿಟ್ಟಿದೆ.

ಜಾತಿ ವಿಷಮತೆಯು ಪ್ರಬಲ ಖಂಡನೆಯು ಹೊರತಾಗಿಯೂ ತೊಡೆದು ಹಾಕಲಾಗದ ಜಾತಿ ವ್ಯವಸ್ಥೆ

ಜಾತೀಯತೆ ಮತ್ತು ಜಾತಿಪದ್ಧತಿಯ ಅನಿಷ್ಟಗಳ ವಿರುದ್ಧ ಸಿಡಿದು ನಿಂತ ವೀರಶೈವ ಮತದ ಅನುಯಾಯಿಗಳ ಸಮುದಾಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದುಜಾತಿ ವ್ಯವಸ್ಥೆಯ ಭಾಗವಾಗಿರುವುದಲ್ಲದೆ ಕೆಲವೊಂದುಜಾತಿ ತತ್ವಗಳನ್ನೇ ಅವಲಂಬಿಸಿ ನಿಂತಿದೆಎನ್ನಬಹುದು.

ಹಲವು ಜಾತಿಗಳಿಂದ ಅನುಯಾಯಿಗಳನ್ನು ಸೆಳೆಯುವ ಪ್ರಯತ್ನದ ಹೊರತಾಗಿಯೂ ಸಮಾನತೆಯ ನೆಲೆಯಲ್ಲಿ ಅವರನ್ನು ಒಂದುಗೂಡಿಸಲಾಗದ ವೈಫಲ್ಯ

ಐತಿಹಾಸಿಕ ಕಾರಣಗಳಿಗಾಗಿ ವೀರಶೈವ ಮತವು ಬೇರೆ ಬೇರೆ ಜಾತಿಗಳಿಗೆ ಸೇರಿದವರನ್ನು ತನ್ನೆಡೆಗೆ ಆಕರ್ಷಿಸಿಕೊಂಡು ಮತಾಂತರ ಮಾಡಿಕೊಂಡಿದ್ದರಿಂದಲೇ ಬಹಳ ಭರದಿಂದ, ಬೆಳೆಯಲು ಸಾಧ್ಯವಾಯಿತು. "ಈ ವೈವಿಧ್ಯಮಯವಾದ ಜಾತಿ ಮೂಲದ ಮತಾಂತರಿತ ಸಮೂಹಗಳನ್ನು ಒಂದುಗೂಡಿಸಿ ಸಮಾನತೆಯ ತತ್ವದ ಆಧಾರದ ಮೇಲೆ ಬೆಸೆಯುವಂತೆ ಮಾಡುವಲ್ಲಿ ವೀರಶೈವ ತತ್ವಜ್ಞಾನವು ಅಸಮರ್ಥವಾಯಿತು ಎಂದೇ ಹೇಳಬಹುದು.

## ಅತಿರೇಕದಕರ್ಮಾಚರಣೆಗೆಕಡಿವಾಣ

ವೈದಿಕ ಸಂಪ್ರಾಯದ ಹಿಂದೂಧರ್ಮಕ್ಕೆ ಹೋಲಿಸಿದರೆ ವೀರಶೈವ ಮತದಲ್ಲಿ ಕರ್ಮಾಚರಣೆಯು ಹೆಚ್ಚು ಲೌಕಿಕ ಅಥವಾ ಅಥವಾ ಮತೇತರ ಸ್ವರೂಪದ್ದು. ಬ್ರಾಹ್ಮಣರಿಗೆ ಸಹಜವಾಗಿದ್ದ ಆಚಾರಗಳು–ಮೈಲಿಗೆಗಳ ಗದ್ದಲವು ವೀರಶೈವರಲ್ಲಿ ಅಷ್ಟಾಗಿ ಇಲ್ಲ. ಬ್ರಾಹ್ಮಣರಲ್ಲಿಇರುವಷ್ಟು ಆಚಾರಗಳು ಸಂಸ್ಕಾರಗಳು ಮತ್ತು ಶುದ್ಧತೆ–ಅಶುದ್ಧತೆಗಳ ವ್ಯತ್ಯಾಸಗಳು ವೀರಶೈವರಲ್ಲಿಲ್ಲ.

## ಸ್ತ್ರೀ–ಪುರುಷ ಸಮಾನತೆಗೆ ಒತ್ತು

ಒಂದು ಸುಧಾರಣಾ ಆಂದೋಲನವಾಗಿ ವೀರ್ಶೈವ ಮತವು ಸ್ತ್ರೀ–ಪುರುಷರ ಸಮಾನತೆಯನ್ನು ಎತ್ತಿ ಹಿಡಯುತ್ತದೆ.

ಪರಶಿವನ ಸಂಕೇತವಾದ 'ಲಿಂಗ'ವನ್ನು ಧಾರಣೆ ಮಾಡುವ ಹಾಗೂ ಪೂಜೆಮಾಡುವ ಹಕ್ಕನ್ನು ವೀರಶೈವ ಮತವು ಸ್ತ್ರೀಯರಿಗೂ ನೀಡಿರುತ್ತದೆ.

**ಬ್ರಾಹ್ಮಣರ ಪ್ರಾಬಲ್ಯಕ್ಕೆ ಸವಾಲು**

ಬ್ರಾಹ್ಮಣರ ಪ್ರಭುತ್ವ ಹಾಗೂ ಪ್ರಾಧಾನ್ಯತೆಯನ್ನು ವೀರಶೈವ ಮತವು ಆರಂಭದಿಂದಲೇ ವಿರೋಧಿಸುತ್ತಾ ಬಂದಿರುವುದರಿಂದ ಎಂ.ಎನ್.ಶ್ರೀನಿವಾಸ್ ಹೇಳುವ "ಸಂಸ್ಕೃತಾನುಕರಣ" ಪ್ರಕ್ರಿಯೆಯು ವೀರಶೈವ ಮತಕ್ಕೆ ಅಷ್ಟಾಗಿ ಅನಯವಾಗುವುದಿಲ್ಲ. ಇದು ಬ್ರಾಹ್ಮಣ ವಿರೋಧಿ ಹಾಗೂ ಸಂಸ್ಕೃತ ವಿರೋದಿ ಆಂದೋಲನವಾಗಿತ್ತು ಎಂಬುದು ಅದಕ್ಕೆ ಸಂಬಂಧಿಸಿದ ದೈನಂದಿನ ಕರ್ಮಾಚರಣಾ ವಿಧಿಗಳನ್ನು ನೋಡಿದಾಗ ಸ್ಪಷ್ಟವಾಗುವುದು.

ವೀರಶೈವ ಸಮುದಾಯದ ಎಲ್ಲಾ ಸ್ತರಗಳಲ್ಲಿರುವ ವೀರಶೈವರು ಸಸ್ಯಹಾರಿಗಳು ಮತ್ತು ಮದ್ಯವರ್ಜಕರು. ಪೌರೋಹಿತ್ಯವು ಬ್ರಾಹ್ಮಣರೆಲ್ಲರ ಸಾಂಪ್ರದಾಯಿಕ ವೃತ್ತಿಯಾಗಿದ್ದರೂ ವೀರಶೈವರಲ್ಲಿ ಪೌರೋಹಿತಕ್ಕಾಗಿಯೇ "ಜಂಗಮ"ರೆಂಬ ಪ್ರತ್ಯೇಕವಾದಜಾತಿ ನಿರ್ಮಾಣವಾಗಿದೆ.

ಕೇಂದ್ರೀಕೃತಅಧಿಕಾರ ವ್ಯವಸ್ಥೆಯಿಲ್ಲದ್ದರಿಂದ ಉದಾರತೆಯ ಬೆಳವಣಿಗೆಗೆ ಅವಕಾಶ

ಕೆಲವು ಐತಿಹಾಸಿಕ ಪ್ರಕ್ರಿಯೆಗಳಿಂದಾಗಿ ವೀರಶೈವ ಮತದಲ್ಲಿ ಒಂದು ಕೇಂದ್ರಿಕೃತವಾದ ಹಾಗೂ ಸಂಘಟಿತವಾದ ಮತ್ತು ಬಲವಾದ ಅಧಿಕಾರದ ಕೇಂದ್ರ ಬೆಳಯಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಅದರ ಉದಾರತೆಗೆ ಒಂದು ಹೊಸ ಆಯಾಮ ದೊರಕಿದಂತಾಯಿತು. 'ಜಾತಿ ಪಂಚಾಯಿತಿ'ಗಳ ಕಪಿಮುಷ್ಟಿಯಿಂದಲೂ ವೀರಶೈವ ಮತವು ಮುಕ್ತವಾಗಿರುವುದು ಅದರ ಇನ್ನೊಂದು ವಿಶಿಷ್ಟತೆ.

ವಿಪರ್ಯಾಸಗಳ ನಡುವೆ ವೀರಶೈವ ಆಂದೋಲನದ ಇತಿಹಾಸವೇ ಸೂಚಿಸುವಂತೆ ಅದು ಬ್ರಾಹ್ಮಣ- ವಿರೋಧಿ ಆಂಧೋಲನವೇ ಆಗಿದೆ. ವೀರಶೈವರು ಮತ್ತು ಬ್ರಾಹ್ಮಣರು ಪರಸ್ಪರ ಸಮಾನಾಂತವಿರುವ ಹಾಗೂ ಪರಸ್ಪರ ಪ್ರತ್ಯೇಕಿತವಾದ ಸಮುದಾಯಗಳಿಗೆ ಸೇರಿದವರು. ಅವರುಗಳ ನಡುವೆ ಆಹಾರದ ವಿನಿಮಯಕೂಡ ಸಂಪ್ರದಾಯಸ್ಥರಲ್ಲಿ ನಡಯುವುದಿಲ್ಲ. ಅವರ ನಡುವೆ ಸಂಸ್ಕಾರ ಹಾಗೂ ಕರ್ಮಾಚರಣೆಗೆ ಸಂಬಂಧಿಸಿದ ಅವಲಂಬನೆಯೂ ಇರುವುದಿಲ್ಲ. ಬ್ರಾಹ್ಮಣರ ಶ್ರೇಷ್ಠತೆಯನ್ನು ಪ್ರಶ್ನಿಸುವ ಮತ್ತು ಅವರತಥಾಕಥಿತ ಪಾವಿತ್ರ್ಯತೆಗೆ ಸವಾಲೆಸೆದಿರುವ ವೀರಶೈವರು ತಮ್ಮನ್ನು 'ಹಿಂದುಳಿದವರೆಂದು' ಹೇಳಿಕೊಳ್ಳಲಾರಂಭಿಸಿದ್ದು ಒಂದು ವಿಪರ್ಯಾಸವೇ ಸರಿ. ಜಾತಿಯ ಶ್ರೇಣಿಯಲ್ಲಿ ಸಾಂಪ್ರದಾಯಿಕವಾಗಿ ಬ್ರಾಹ್ಮಣರನ್ನು ಅತ್ಯೂಚ್ಚ ಸ್ತರದ ಜಾತಿಯವರೆಂದು ಗುರುತಿಸಲಾಗಿದ್ದರೂ ವೀರಶೈವರು ತಮ್ಮನ್ನು ಅವರ ಸಮಾನಸ್ಕಂದರೆಂದು ಹೇಳಿಕೊಳ್ಳುವರು. ಮಾತ್ರವಲ್ಲ; ಪ್ರಜಾಸತ್ತಾತ್ಮಕರಾಜಕೀಯ ಪ್ರಕ್ರಿಯೆಗಳ ಪೂರ್ಣಉಪಯೋಗ ಪಡಯುವ ದೃಷ್ಟಿಯಿಂದ ಬ್ರಾಹ್ಮಣರಿಗೆ ನಿರಾಕರಿಸಲಾಗಿರುವ ಹಿಂದುಳಿದಿರುವಿಕಯ ಲಾಭವನ್ನು ವೀರಶೈವರು ಸಂಪಾದಿಸಿಕೊಂಡಿದ್ದಾರೆ.

**ಆಧಾರ ಗ್ರಂಥಗಳು:**

೧)ಕನ್ನಡ ವಿಮರ್ಶೆಗಳಲ್ಲಿ ಈಚಿನ ಒಲವುಗಳು, ೧೯೮೮.

೨)ಸಾಹಿತ್ಯ ಶ್ರೇಷ್ಠತೆ, 'ಪ್ರಜಾವಾಣಿ' ಪತ್ರಿಕೆ ಬರಹಟಿಪ್ಪಣಿ, ೧೯೯೦.

೩)ಸಾಹಿತ್ಯ ವಿಮರ್ಶೆಯ ತತ್ವಗಳು.

■■

ಸಹಾಯಕ ಪ್ರಾಧ್ಯಾಪಕರು ಸಮಾಜಶಾಸ್ತ್ರ ವಿಭಾಗ ಎಂ.ಜಿ.ವಿ.ಸಿ. ಕಲಾ, ವಾಣಿಜ್ಯ ಮತ್ತು ವಿಜ್ಞಾನಕಾಲೇಜ ಮುದ್ದೇಬಿಹಾಳ ಜಿ: ವಿಜಯಪುರ